# ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ನ್ಯಾಯಾಲಯ, ಕಲಘಟಗಿ

**ಸಿಸಿ ನಂ 55/2021**

**ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ 19-03-2025 ರಂದು ಪ್ರಮಾಣ ಮಾಡಿಸಲಾಯಿತು**

| | | | |
|---|---|---|---|
| **ಸಾಕ್ಷಿಯ ಹೆಸರು** | ಃ | ಮಹೇಶ ಮರಿಬಸಯ್ಯನವರ | **ಪ್ರಾ.ಸಾ ಃ 05** |
| **ತಂದೆ ಃ ಗಂಡ ಹೆಸರು** | ಃ | ಚನ್ನಯ್ಯ | **ಚಾ.ಸಾ ಃ 06** |
| **ವಯಸ್ಸು** | ಃ | 40 ವರ್ಷ | |
| **ಉದ್ಯೋಗ** | ಃ | ಕ್ಲರ್ಕ, ಆಡಳಿತ ಕಚೇರಿ, ಎಸ್ ಬಿ ಐ ಹುಬ್ಬಳ್ಳಿ | |
| **ವಾಸಸ್ಥಳ** | ಃ | ಹುಬ್ಬಳ್ಳಿ | |

**ಮುಖ್ಯ ವಿಚಾರಣೆ ಃ ಮಾನ್ಯ ಸ.ಸ.ಅ. ರವರಿಂದಃ**

ದಿನಾಂಕ 11.04.2016 ರಿಂದ 13.08.2019 ರವರೆಗೆ ಕಲಘಟಗಿಯ ಎಸ್ ಬಿ ಎಂ ಶಾಖೆಯಲ್ಲಿ ಕ್ಲರ್ಕ ಎಂದು ಕರ್ತವ್ಯನಿರ್ಹಿಸಿರುತ್ತೇನೆ.

ನನಗೆ ಚಾಸಾ-1 ರಿಂದ 3, 7 ರವರ ಪರಿಚಯ ಇದೆ. ನನಗೆ 1ನೇ ಆರೋಪಿಯ ಪರಿಚಯ ಇಲ್ಲ. 3ನೇ ಆರೋಪಿಯ ಪರಿಚಯ ಇದೆ. ನಾನು ಶಾಖೆಗೆ ವರ್ಗಾವಣೆಗೊಂಡು ಬಂದಾಗ 3ನೇ ಆರೋಪಿ ಶಾಖಾವ್ಯವಸ್ಥಾಕರು ಆಗಿದ್ದರು. 3ನೇ ಆರೋಪಿ ವರ್ಗಾವಣೆ ಆದ ನಂತರ ಚಾಸಾ-1 ರವರು ಬ್ಯಾಂಕ ಪ್ರಭಾರ ವಹಿಸಿಕೊಂಡಿರುತ್ತಾರೆ. 1ನೇ ಆರೋಪಿ ನಮ್ಮ ಬ್ಯಾಂಕ ಶಾಖೆಯಿಂದ ಕಾರ ಲೋನ ಪಡೆದುಕೊಂಡು ಹಣ ಮರುಪಾವತಿ ಮಾಡಿರಲಿಲ್ಲ, 2ನೇ ಆರೋಪಿಯು 1ನೇ ಆರೋಪಿ ಅಲ್ಲದೆ ಬೇರೆ ಜನರನ್ನು ಸಾಲ ಪಡೆದುಕೊಳ್ಳಲು ನಮ್ಮ ಕಚೇರಿಗೆ ಕರೆದುಕೊಂಡು ಬಂದಿರುವುದು ನನಗೆ ಗೊತ್ತಿಲ್ಲ. ಕಾರ ಲೋನಗೆ ಸಂಬಂಧಿಸಿದ ದಾಖಲೆಗಳನ್ನು ಚಾಸಾ-1 ರವರು ಪರಿಶೀಲಿಸಿದಾಗ ದಾಖಲೆಗಳು ಸರಿಯಾಗಿ ಇಲ್ಲ ಎಂದು ಕಂಡುಬಂದಿರುತ್ತದೆ. ಈ ಬಗ್ಗೆ ಮೇಲಾಧಿಕಾರಿಗಳಿಗೆ ತಿಳಿಸಿದಾಗ ಕಾನೂನು ಕ್ರಮ ಜರುಗಿಸುವಂತೆ ಚಾಸಾ-1 ರವರಿಗೆ ಮಾಹಿತಿ ನೀಡಿರುತ್ತಾರೆ. ಪೋಲೀಸರು ನನ್ನನ್ನು ವಿಚಾರಿಸಿ ಹೇಳಿಕೆ ಪಡೆದಿಲ್ಲ, ಅದೇ ರೀತಿ ಮರು ಹೇಳಿಕೆ ಪಡೆದಿಲ್ಲ.

***(ಮಾನ್ಯ ಸ.ಸ.ಅ ಯವರ ವಿನಂತಿ ಮೇರೆಗೆ ಸಾಕ್ಷಿಯನ್ನು*** ಭಾಗಶಃ ***ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ,*** ಪಾಟೀ ಸವಾಲಿಗೆ ಅನುಮತಿಸಿದೆ)

**ಪಾಟೀ ಸವಾಲುಃ ಮಾನ್ಯ ಸ.ಸ.ಅ. ರವರಿಂದಃ**

2015 ರಲ್ಲಿ 1 ಮತ್ತು 2ನೇ ಆರೋಪಿ ನಮ್ಮ ಬ್ಯಾಂಕ ಶಾಖೆಗೆ ಮೇಲಿಂದ ಮೇಲೆ ಕಾರ ಲೋನ ಪಡೆದುಕೊಳ್ಳುವ ಸಲುವಾಗಿ ಬಂದು 3ನೇ ಆರೋಪಿಯ ಕಚೇರಿಯಲ್ಲಿ ಬಹಳ ಹೊತ್ತು ಕುಳಿತುಕೊಳ್ಳುತ್ತಿದ್ದರು ಹಾಗೂ 2ನೇ ಆರೋಪಿ ಬೇರೆ ಜನರನ್ನು ಸಹಕರೆದುಕೊಂಡು ಬಂದು ಅವರಿಗೆ ಜಾಮೀನುದಾರನಾಗಿ ಕಾರ ಲೋನ ಹಣ ಕೊಡಿಸುತ್ತಿದ್ದಾನೆಂದು ನಮ್ಮ ಬ್ಯಾಂಕ ಸಿಬ್ಬಂದಿಯವರು ಮಾತನಾಡುತ್ತಿದ್ದುದರಿಂದ ನನಗೆ ತಿಳಿದುಬಂದಿರುತ್ತದೆ ಎಂದರೆ ಸರಿಯಲ್ಲ. 1ನೇ ಆರೋಪಿಯು ಕಾರ ಖರೀದಿಸುವ ಉದ್ದೇಶದಿಂದ ಭಾಗ್ಯಲಕ್ಷ್ಮಿ ಮೋಟರ್ಸ ಹೊಸಪೇಟೆ ಇವರ ಹೆಸರಿನ ಕೊಟೇಷನ ದಾಖಲೆ

ಹಾಗೂ ಭಾಗ್ಯ ಲಕ್ಷ್ಮಿ ಮೋಟರ್ಸ ಹೊಸಪೇಟೆ ಇವರಲ್ಲಿ ಮಾರ್ಜಿನ ಹಣ ತುಂಬಿದ ಬಗ್ಗೆ ಖೊಟ್ಟಿ ರಶೀದಿಯನ್ನು ನಮ್ಮ ಬ್ಯಾಂಕಿಗೆ ವಂಚನೆ ಮಾಡುವ ಉದ್ದೇಶದಿಂದ ಸೃಷ್ಟಿ ಮಾಡಿ ಅವು ನೈಜ ದಾಖಲೆಗಳು ಎಂದು ನಮ್ಮ ಬ್ಯಾಂಕಿಗೆ ಸಲ್ಲಿಸಿದ್ದು, 3 ನೇ ಆರೋಪಿ ಇವರು 1 ಮತ್ತು 2 ನೇ ಆರೋಪಿತರೊಂದಿಗೆ ಶಾಮಿಲಾಗಿ ದಾಖಲೆಗಳನ್ನು ಪರಿಶೀಲಿಸದೆ ಒಳಸಂಚು ರೂಪಿಸಿ ದಾಖಲೆಗಳು ಖೊಟ್ಟಿಯಾಗಿರುತ್ತವೆ ಎನ್ನುವದು ಗೊತ್ತಿದ್ದರೂ ಕೂಡಾ ಬ್ಯಾಂಕ ನಿಯಮಾವಳಿ ಉಲ್ಲಂಘಿಸಿ 1 ನೇ ಆರೋಪಿಯಿಂದ ಎಸ್ ಬಿ ಐ ಲೈಪ ಇನ್ಸೂರೆನ್ಸ ಪಾಲಸಿ ಮಾಡಿಸಿಕೊಂಡು ಬ್ಯಾಂಕನಿಂದ ಇನಸೆಂಟಿವ್ ಹಣ ಪಡೆದುಕೊಂಡು ವಂಚನೆ ಮಾಡುವ ಉದ್ದೇಶದಿಂದ ದಿನಾಂಕ 25.04.2015 ರಂದು ರೂ 4,00,000/- ಗಳನ್ನು 1 ನೇ ಆರೋಪಿಯ ಎಸ್ ಬಿ ಖಾತೆ ನಂ 64168389215 ನೇದ್ದಕ್ಕೆ ಜಮಾ ಮಾಡಿ ನಂತರ ಸದರ ಹಣವನ್ನು ಧಾರವಾಡ ಕಾರ್ಪೋರೇಷನ ಬ್ಯಾಂಕನಲ್ಲಿರುವ ಭಾಗ್ಯಲಕ್ಷ್ಮಿ ಮೋಟರ್ಸ ಪ್ರೊಪರೈಟರ 2 ನೇ ಆರೋಪಿಯ ಚಾಲ್ತಿ ಖಾತೆ ನಂ 306201601150002 ನೇದ್ದಕ್ಕೆ ಆರ್ ಟಿ ಜಿ ಎಸ್ ಮುಖಾಂತರ ವರ್ಗಾವಣೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. 1 ನೇ ಆರೋಪಿಯು ಕಾರ ಸಾಲದ ಹಣ ಮಂಜೂರು ಮಾಡಿಸಿಕೊಂಡು ಕಾರ ಖರೀದಿಸದೆ ಬ್ಯಾಂಕಿಗೆ ಹಣವನ್ನು ಮರಳಿಸದೆ ಮರುಪಾವತಿ ಮಾಡದೆ ಆರೋಪಿತರು ಎಲ್ಲರೂ ಮಿಲಾಪಿಯಾಗಿ ಸ್ವಂತಕ್ಕೆ ದುರುಪಯೋಗ ಪಡಿಸಿಕೊಂಡು ಬ್ಯಾಂಕಿಗೆ ನಷ್ಟ ಪಡಿಸಿ ಮೋಸ ಹಾಗೂ ನಂಬಿಕೆದ್ರೋಹ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಈ ಬಗ್ಗೆ ಪೋಲೀಸರ ಮುಂದೆ ನಿಪಿ-18 ರಂತೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ.

ದಿನಾಂಕ 05.05.20219 ರಂದು ಪೋಲೀಸರು ನನ್ನನ್ನು ಠಾಣೆಗೆ ಕರೆಸಿದ್ದು ಬ್ಯಾಂಕ ಖಾತೆ ದಾಖಲೆಗಳನ್ನು ತೋರಿಸಿದ್ದು ಅದು 2 ನೇ ಆರೋಪಿ ಹೆಸರಿನಲ್ಲಿ ಇತ್ತು ಎಂದರೆ ಸರಿಯಲ್ಲ. ಅದೇ ರೀತಿ 1 ನೇ ಆರೋಪಿ ಹೆಸರಿಗೆ ಆರ್ ಟಿ ಜಿ ಎಸ್ ಮೂಲಕ ನಮ್ಮ ಬ್ಯಾಂಕ ಶಾಖೆಯಿಂದ ಹಣ ವರ್ಗಾವಣೆ ಆದ ಬಗ್ಗೆ ಉಲ್ಲೇಖ ಇರುತ್ತದೆ ಎಂದರೆ ಸರಿಯಲ್ಲ. ಆರೋಪಿತರು ಎಲ್ಲರೂ ಸೇರಿಕೊಂಡು ಬ್ಯಾಂಕಿನ ಹಣವನ್ನು ತಮ್ಮ ಸ್ವಂತ ಲಾಭಕ್ಕಾಗಿ ಬಳಸಿಕೊಂಡು ಬ್ಯಾಂಕಿಗೆ ಮೋಸ ಹಾಗೂ ನಂಬಿಕೆದ್ರೋಹ ಉಂಟುಮಾಡಿದ್ದಾರೆ ಎಂದರೆ ಸರಿಯಲ್ಲ. ಈ ಬಗ್ಗೆ ನಿಪಿ-19 ರಂತೆ ತನಿಖಾಧಿಕಾರಿ ಮುಂದೆ ಮರು ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. 3 ನೇ ಆರೋಪಿ ನಮ್ಮ ಹಿಂದಿನ ಬ್ಯಾಂಕಿನ ವ್ಯವಸ್ಥಾಪಕರು ಆಗಿದ್ದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ**

ಏನು ಇಲ್ಲ

**ಮರು ವಿಚಾರಣೆಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೆ ಸರಿ ಇದೆ.**

**ಹಿರಿಯ ದಿವಾಣಿ ನ್ಯಾಯಾಧೀಶರು,**
**ಕಲಘಟಗಿ.**